ಸಂತೃಪ್ತಿಯ ಭಾವವಿತ್ತು. ಪ್ರಾಯಶಃ ನಿನ್ನೆ ರಾತ್ರಿಯ ಆತನ ಸಂಚಾರದಿಂದ ಮೋಹಿತನ ನಾಪತ್ತೆ ಪ್ರಕರಣದಲ್ಲಿ ಆತನಿಗೆ ಏನೋ ಮಹತ್ವದ ಸುಳಿವು ಸಿಕ್ಕಿರಬೇಕು ಅಂದುಕೊಂಡೆ.

"ಪ್ರಸಾದ್, ಬೇಗ ನಾಷ್ಟಾ ಮುಗಿಸು. ನಮ್ಗೆ ಇವತ್ತು ದಿನವಿಡೀ ಕೆಲಸವಿದೆ."

ತರಾತುರಿಯಿಂದ ನಾಷ್ಟಾ ಮುಗಿಸಿ, ನಾವು ಮನೆಯಿಂದ ಹೊರ ಬೀಳುವಾಗ ಗಂಟೆ ಒಂಬತ್ತು ದಾಟಿತ್ತು. ಕರಮಚಂದ ಮೌನವಾಗಿ ಕಾರು ಚಲಾಯಿಸಿದ. ನಾವು ಮೊದಲು ಬಂದಿದ್ದು ಗ್ರಾಮಾಂತರ ಠಾಣೆಗೆ. ವೆಲೈಂಟಿನ್ ಡಿಸೋಜ ನಮ್ಮನ್ನು ಆತ್ಮೀಯವಾಗಿ ಸ್ವಾಗತಿಸಿದ. ಅವನು ಅನೇಕ ಪ್ರಕರಣಗಳನ್ನು ಬಗೆಹರಿಸುವಲ್ಲಿ ಕರಮಚಂದನ ನೆರವು ತೆಗೆದುಕೊಂಡವನೆ.

"ಮೋಹಿತನ ನಾಪತ್ತೆ ತನಿಖೆ ಎಲ್ಲೀವರೆಗೂ ಬಂತು, ಇನ್‌ಸ್ಪೆಕ್ಟರ್?"

"ಓಹ್... ಅದ್ರ ತನಿಖೆಗೆ ನೀವ್ಯಾಕೆ ಬಂದ್ರಿ? ಅದೊಂದು ಸರಳ ಪ್ರಕರಣ. ನಮ್ಮ ತನಿಖೆ ಬಹುತೇಕ ಮುಗಿಯುವ ಹಂತಕ್ಕೆ ಬಂದಿದೆ. ಕೆಲವು ಕೊಂಡಿಗಳಷ್ಟೇ ಬಾಕಿ ಇರೋದು. ಮೂಗಿನ ತನಕ ಸಾಲ ಮಾಡಿದೋನು ಓಡಿಹೋಗದೆ ಇನ್ನೇನು ಮಾಡ್ಬೇಕು ಹೇಳಿ? ಇಲ್ನೋಡಿ, ಆರು ತಿಂಗಳ ಹಿಂದೆ ಪೊಲೀಸ್ ರಕ್ಷಣೆ ಕೋರಿ, ಅವ್ನು ನಮ್ಗೆ ಕೊಟ್ಟಿರೊ ಮನವಿ ಪತ್ರ. ಸಾಲಗಾರರಿಂದ ತನ್ನ ಜೀವಕ್ಕೆ ಅಪಾಯ ಇದೆ ಅಂತ."

ಡಿಸೋಜ ಕಡತವೊಂದರಿಂದ ಕಾಗದವೊಂದನ್ನೆಳೆದು ನಮ್ಮೆದುರು ಹಿಡಿದ. ಅದರಲ್ಲಿ ಮೋಹಿತ್, 'ತನಗೆ ಬಹಳಷ್ಟು ಸಾಲವಿದ್ದು, ಅದನ್ನು ಹಿಂದಿರುಗಿಸಲು ಯತ್ನಿಸುತ್ತಿದ್ದೇನೆ, ಅದಕ್ಕೆ ಸಮಯಾವಕಾಶ ಬೇಕಾಗುತ್ತೆ, ಆದರೆ ಅಷ್ಟರಲ್ಲಿ ಸಾಲಗಾರರು ಗೂಂಡಾಗಳನ್ನು ಬಳಸಿ, ತನಗೆ ಕೊಲೆ ಬೆದರಿಕೆ ಹಾಕ್ತಿದ್ದಾರೆ, ಹಾಗಾಗಿ ಪೊಲೀಸ್ ರಕ್ಷಣೆ ಕೊಡಿ' ಎಂದು ಬರೆದಿದ್ದ.

"ಈ ಮನವಿಗೆ ನೀವೇನು ಹೇಳಿದ್ರೀ, ಡಿಸೋಜ?"

"ಇದು ನನ್ನ ವ್ಯಾಪ್ತಿಗೆ ಬರೋದಲ್ಲ. ಹಾಗಾಗಿ ಮೇಲಧಿಕಾರಿಗಳಿಗೆ ಕಳಿಸ್ದೆ. ಆದ್ರೆ ಅವರು ಅದನ್ನ ಸಿಬ್ಬಂದಿ ಕೊರತೆಯಿಂದಾಗಿ ತಿರಸ್ಕರಿಸಿದ್ರು. ಈಗ ಬಹುಶಃ ಯಾರೋ ಸಾಲಗಾರರು ವಸೂಲಿ ಮಾಡೋಕೆ ಗೂಂಡಾ ಜೊತೆಗೆ ಬಂದಿರ್ಬೇಕು. ಆಸಾಮಿ ನಾಪತ್ತೆಯಾಗಿದಾನೆ, ಅಷ್ಟೇ."

"ಆದ್ರೆ ಅವ್ನ ಹೆಂಡ್ತಿ ಸಾಲದ ಬಗ್ಗೆ ಚಕಾರ ಎತ್ತಿಲ್ಲವಲ್ಲ!"

ವರ್ಷಿಣಿಯೂ ಹಣಕಾಸಿನ ಮುಗ್ಗಟ್ಟಿನ ಬಗ್ಗೆ ಪ್ರಸ್ತಾಪವೇ ಯಾಕೆ ಮಾಡಲಿಲ್ಲ? ನನ್ನ ತಲೆ ಕೊರೆದ ಪ್ರಶ್ನೆ.

"ಪ್ರಾಯಶಃ ಅವ್ನು ಹೆಂಡ್ತಿಗೆ ಎಲ್ಲಾ ಸಮಾಚಾರ ತಿಳಿಸಿಲ್ಲವೇನೋ! ಅಷ್ಟು ಸಾಲ ಯಾಕ್ ಮಾಡಿದ್ದು ಅನ್ನೋದು ಹೆಂಡ್ತಿಗೆ ಗೊತ್ತಾದ್ರೆ ತೊಂದ್ರೆ ಅಂದುಕೊಂಡಿರ್ಬೇಕು... ಬಹುಶಃ ಬೇರೆ ಹವ್ಯಾಸಗಳಿದ್ದಿರಬೇಕು!"

ಜೋಕು ಹೇಳಿದವನಂತೆ ಗಟ್ಟಿಯಾಗಿ ನಕ್ಕ ಡಿಸೋಜ.

"ಅವ್ನು ಪ್ರಪಾತಕ್ಕೆ ಜಾರಿ ಬಿದ್ದಿರಲೂಬಹುದು. ಅಲ್ಲಿ ಆಳವಾದ ಬೂಟುಗಳ ಗುರುತು ಕೊರಕಲಿನತ್ತ ಹೋಗಿದೆ. ಹೊಡೆದಾಟ ನಡೆದಂಗಿದೆ. ಜೊತೆಗೆ ಯಾವುದೋ ಭಾರೀ ಸರೀಸೃಪ ಹರಿದಾಡಿದ ಚಿಹ್ನೆಗಳಿವೆ. ರಕ್ತ ಚೆಲ್ಲಿದೆ."

ನಾನು ಮಾತು ಜೋಡಿಸಿದೆ.

"ಹೆಜ್ಜೆ ಗುರುತು ನಮ್ಮ ದಿಕ್ಕು ತಪ್ಪಿಸುವ ಉದ್ದೇಶದಿಂದ ಮಾಡಿರಬೇಕು. ಸಾಲಗಾರ ಹಣ ಕೇಳುವಾಗ ಜಗಳವಾಗಿರಲೂಬಹುದು. ಹೊಡೆದಾಟದಲ್ಲಿ ಗಾಯವಾಗಿ ರಕ್ತ ಜಿನುಗಿರಬೇಕು.